ಪ್ರಾರ್ಥನೆ

# ಶ್ರೀರಾಮಕೃಷ್ಣ ಸುಪ್ರಭಾತಮ್ - ೪

**ಅತ್ಯಂತನಿರ್ಮಲಮನಸ್ಕ ಸಮಸ್ತಲೋಕೈಃ**
**ಸ್ತುತ್ಯಸ್ವಭಾವ ಭವಶೋಕವಿನಾಶಹೇತೋ ।**
**ಪ್ರತ್ಯಗ್ರಭವ್ಯಪಥದರ್ಶಕ ಭಕ್ತಿಯೋಗಿನ್**
**ಶ್ರೀರಾಮಕೃಷ್ಣಭಗವನ್ ತವ ಸುಪ್ರಭಾತಮ್ ॥ ೧೦ ॥**



ಅತ್ಯಂತ ನಿರ್ಮಲವಾದ ಮನಸ್ಸುಳ್ಳ, ಎಲ್ಲಾ ಲೋಕದಿಂದಲೂ ಸ್ತೋತ್ರ ಮಾಡಲ್ಪಡುವ ಸ್ವಭಾವವುಳ್ಳ, ಸಂಸಾರದ ದುಃಖವನ್ನು ನಾಶಮಾಡಬಲ್ಲ, ಹೊಚ್ಚಹೊಸ ಮುಕ್ತಿಮಾರ್ಗವನ್ನು ತೋರಿಸಿಕೊಟ್ಟ ಭಕ್ತಿಯೋಗಿ ಶ್ರೀರಾಮಕೃಷ್ಣರೆ, ನಿಮಗೆ ಶುಭೋದಯವಾಗಲಿ.

**ಸಂತಾನಿತಾತ್ಮಸುಖಭಾರತಮಾತೃದಿವ್ಯ-**
**ಸಂತಾನಸತ್ತಮ ಸನಾತನ ಧರ್ಮಚಾರಿನ್ ।**
**ಸಂತಾಪನಾಶನ ಸದಾ ಶರಣಾಗತಾನಾಮ್**
**ಶ್ರೀರಾಮಕೃಷ್ಣಭಗವನ್ ತವ ಸುಪ್ರಭಾತಮ್ ॥ ೧೧ ॥**

ನಿರಂತರ ಆತ್ಮಸುಖದಲ್ಲಿ ಮುಳುಗಿರುವ ಭಾರತಮಾತೆಯ ದಿವ್ಯ ಪುತ್ರರಲ್ಲಿ ಶ್ರೇಷ್ಠರಾದ, ಸನಾತನ ಧರ್ಮವನ್ನು ಆಚರಿಸುವ, ಶರಣಾಗತರಾದವರ ದುಃಖವನ್ನು ಸದಾ ನಾಶಮಾಡುವ ಶ್ರೀರಾಮಕೃಷ್ಣರೆ, ನಿಮಗೆ ಶುಭೋದಯವಾಗಲಿ.

**ವೈರಾಗ್ಯಶಾಂತಿಮಣಿಮಂದಿರದಿವ್ಯದೀಪ್ತಿ-**
**ಪೂರಾಭಿದೀಪ್ತಮುಖ ಸತ್ತ್ವಗುಣೈಕಸಿಂಧೋ ।**
**ಸಾರಾಮಲಾಶಯ ಸದಾಶಯಗೀತಕೀರ್ತೇ**
**ಶ್ರೀರಾಮಕೃಷ್ಣಭಗವನ್ ತವ ಸುಪ್ರಭಾತಮ್ ॥ ೧೨ ॥**

ವೈರಾಗ್ಯ ಮತ್ತು ಶಾಂತಿ ಎಂಬ ರತ್ನಗಳ ನೆಲೆಯಾದ, ದಿವ್ಯ ಕಾಂತಿ ಪ್ರವಾಹದಿಂದ ಬೆಳಗುತ್ತಿರುವ ಮುಖವುಳ್ಳ, ಕೇವಲ ಸತ್ತ್ವಗುಣದ ಸಾಗರವಾಗಿರುವ, ಶುದ್ಧವಾದ ಚಿಂತನೆಗಳುಳ್ಳ, ಸದಾಶಯವುಳ್ಳವರಿಂದ ಕೊಂಡಾಡಲ್ಪಟ್ಟ ಕೀರ್ತಿಯುಳ್ಳ ಶ್ರೀರಾಮಕೃಷ್ಣರೆ, ನಿಮಗೆ ಶುಭೋದಯವಾಗಲಿ.

**ಯಃ ಪ್ರಾತರೇತದತಿಪಾವನಸುಪ್ರಭಾತಂ**
**ಶ್ರೀರಾಮಕೃಷ್ಣಶುಭನಾಮನಿಸುಪ್ರಣೀತಮ್ ।**
**ಭಕ್ತ್ಯಾ ಪಠೇತ್ ಸ ತು ಭವಾರ್ಣವಪಾರಮೇತ್ಯ**
**ಮುಕ್ತ್ಯಾಸ್ಪದಂ ಮುರರಿಪೋಃ ಪದಮಾಶು ಯಾಯಾತ್ ॥ ೧೩॥**

ಶ್ರೀರಾಮಕೃಷ್ಣರ ಮಂಗಳನಾಮವನ್ನಾಧರಿಸಿ ರಚಿಸಿದ ಈ ಅತ್ಯಂತ ಪವಿತ್ರವಾದ ಸುಪ್ರಭಾತ ಸ್ತೋತ್ರವನ್ನು ಬೆಳಿಗ್ಗೆ ಭಕ್ತಿಯಿಂದ ಯಾರು ಪಠಿಸುವರೋ ಅವರು ಈ ಭವಸಾಗರವನ್ನು ದಾಟಿ, ಮುಕ್ತಿಯ ನೆಲೆಯಾದ, ಮುರರಿಪುವಾದ ನಾರಾಯಣನ ನೆಲೆಯನ್ನು ಬೇಗನೆ ಸೇರುವರು.

-ಸ್ವಾಮಿ ಜ್ಞಾನಾನಂದ ಸರಸ್ವತೀ

ಸೂಕ್ತಿಪ್ರಭ

# ಶ್ರೀರಾಮಕೃಷ್ಣರ ಉಪದೇಶಗಳು

❁ ವ್ಯಾಕುಲ ಹೃದಯದಿಂದ ಆತನಿಗೆ ಪ್ರಾರ್ಥನೆ ಸಲ್ಲಿಸು; ಆತನಿಗಾಗಿ ಅಳು. ಆಗ ಚಿತ್ತಶುದ್ಧಿ ಉಂಟಾಗುತ್ತದೆ. ನಿರ್ಮಲವಾದ ನೀರಿನಲ್ಲಿ ಸೂರ್ಯನ ಪ್ರತಿಬಿಂಬವನ್ನು ನೋಡಬಹುದು. ಭಕ್ತನ 'ನಾನು' ಎಂಬ ರೂಪಿನ ಕನ್ನಡಿಯಲ್ಲಿ ಸಗುಣಬ್ರಹ್ಮನ, ಆದ್ಯಾಶಕ್ತಿಯ ದರ್ಶನ ದೊರೆಯುತ್ತದೆ. ಆದರೆ ಕನ್ನಡಿಯನ್ನು ಬಹಳ ಚೆನ್ನಾಗಿ ಒರೆಸಬೇಕು. ಕೊಳೆ ಕುಳಿತಿದ್ದರೆ ಸರಿಯಾದ ಪ್ರತಿಬಿಂಬ ಬೀಳದು.

❁ ಪ್ರೇಮ ಅಂದರೆ ಭಗವಂತನಲ್ಲಿ ಅಂಥ ಅಗಾಧವಾದ ಅನುರಾಗ. ಅದರ ದೆಸೆಯಿಂದ ಜಗತ್ತೂ ಮರೆತುಹೋಗಿಬಿಡುತ್ತದೆ. ಜೊತೆಗೆ ಅಷ್ಟೊಂದು ಪ್ರಿಯವಾಗಿರುವ ಸ್ವಂತ ದೇಹ ಕೂಡ ಮರೆತುಹೋಗಿಬಿಡುತ್ತದೆ. ಅದಕ್ಕೆ 'ಪ್ರೇಮ' ಅಂತ ಹೆಸರು.

❁ ಭರತರಾಜ 'ಜಿಂಕೆ! ಜಿಂಕೆ!' ಎಂದು ಕೂಗಿಕೊಳ್ಳುತ್ತಲೆ ದೇಹತ್ಯಾಗ ಮಾಡಿದ. ಅದಕ್ಕಾಗಿ ಮುಂದಿನ ಜನ್ಮದಲ್ಲಿ ಆತನಿಗೆ ಜಿಂಕೆಯ ಜನ್ಮ ದೊರೆಯಿತು. ಭಗವಂತನ ಚಿಂತನೆ ಮಾಡುತ್ತ ದೇಹತ್ಯಾಗ ಮಾಡಿದರೆ ಭಗವಂತನ ಸಾಕ್ಷಾತ್ಕಾರ ದೊರಕುತ್ತದೆ. ಮತ್ತೆ ಈ ಸಂಸಾರಕ್ಕೆ ಬರಬೇಕಾಗಿಲ್ಲ.

❁ ಈ ಸಂಸಾರದಲ್ಲಿ ಕಾಮ, ಕ್ರೋಧ ಇವೇ ಮೊದಲಾದುವುಗಳೊಡನೆ ಯುದ್ಧ ಮಾಡಬೇಕಾಗಿದೆ. ವಿವಿಧ ಕಾಮನೆಗಳೊಡನೆ ಯುದ್ಧ ಮಾಡಬೇಕಾಗಿದೆ, ಆಸಕ್ತಿಯೊಡನೆ ಯುದ್ಧ ಮಾಡಬೇಕಾಗಿದೆ. ಯುದ್ಧವನ್ನು ಕೋಟೆಯೊಳಗಿನಿಂದ ಮಾಡುವುದೇ ಮೇಲು. ಗೃಹದಲ್ಲಿರುವುದು ಕೋಟೆಯೊಳಗಿನಿಂದ ಯುದ್ಧ ಮಾಡಿದ ಹಾಗೆ.

❁ ಸಂಸಾರದಲ್ಲಿ ಇಟ್ಟಿದ್ದಾನೆ, ಅದಕ್ಕೇನು ತಾನೆ ಮಾಡಲಾದೀತು? ಎಲ್ಲವನ್ನೂ ಆತನಿಗೆ ಸಮರ್ಪಿಸಿಬಿಡು - ಆತನಿಗೆ ಆತ್ಮಸಮರ್ಪಣೆ ಮಾಡಿಕೊ. ಹಾಗೆ ಮಾಡಿದರೆ ಮತ್ತೆ ಯಾವ ತೊಂದರೆಯೂ ಬರದು. ಆಗ ಎಲ್ಲವನ್ನೂ ಆತನೇ ಮಾಡುತ್ತಿದ್ದಾನೆ ಎಂಬ ಅರಿವು ಉಂಟಾಗುತ್ತದೆ.

ಶ್ರೀರಾಮಕೃಷ್ಣ ವಚನವೇದದಿಂದ